ಪ್ರಮಾಣಪತ್ರಕ್ಕೆ ಲಗತ್ತು

ದಿನಾಂಕ**: 04.07.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರೆದ ಪಾಟೀ ಸವಾಲು **3, 4** ನೇ ಪ್ರತಿವಾದಿ ಪರ ಶ್ರೀ ಜಿ ಎನ್ ವಿ ವಕೀಲರಿಂದಃ-

ಪುಟ್ಟಣಶೆಟ್ಟಿಯ ಮೊದಲನೇ ಹೆಂಡತಿಯ ಹೆಸರು ಕೃಷ್ಣಮ್ಮ. ಅವರಿಗೆ ವಿನೋದ ಮತ್ತು ರೇಣುಕಾ ಎಂಬ ಇಬ್ಬರು ಮಕ್ಕಳು. ಸದರಿಯವರು ಮರಣಹೊಂದಿರುತ್ತಾರೆ. 2 ನೇ ಪ್ರತಿವಾದಿ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಗಂಡನ ಹೆಸರು ಕೃಷ್ಣಯ್ಯಶೆಟ್ಟಿ ಅವರು ಹೊಸೂರಿನಲ್ಲಿ ವಾಸವಾಗಿರುತ್ತಾರೆ. ಪುಟ್ಟಣಶೆಟ್ಟಿ ಮತ್ತು ಕೃಷ್ಣಮ್ಮನವರಿಗೆ ಗಂಡು ಸಂತತಿ ಇಲ್ಲ. ಕೃಷ್ಣಮ್ಮನ ಅಕ್ಕ ಪಾವರ್ತಮ್ಮ ಎಂದರೆ ನನಗೆ ಗೊತ್ತಿಲ್ಲ. ಲಲಿತಮ್ಮ ಅಂದರೆ ನನ್ನ ತಾಯಿ ಪಾವರ್ತಮ್ಮನ ಮಗಳು ಎಂದರೆ ಸರಿ. ಕೃಷ್ಣಮ್ಮ ಮತ್ತು ಪಾವರ್ತಮ್ಮ ಅಕ್ಕತಂಗಿ ಎಂದರೆ ಸರಿ. ಲಲಿತಮ್ಮನ ಗಂಡ ಪುಟ್ಟಣಶೆಟ್ಟಿರವರು ಚಿಂತಾಮಣಿಯಲ್ಲಿ ವಾಸವಿದ್ದರು ಎಂದರೆ ಸರಿ.

2. ನಾನು 1 ನೇ ಪ್ರತಿವಾದಿಯ ಮಗಳು ಎಂದು ವಾದಪತ್ರದಲ್ಲಿ ಹೇಳಿರುತ್ತೇನೆ. ನಾನು 1 ನೇ ಪ್ರತಿವಾದಿಯ ಮಗಳು ಎಂದು ವಾದಪತ್ರದಲ್ಲಿ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಂಜುನಾಥ ನನ್ನ ಅಣ್ಣ. ನನ್ನ ತಂದೆ ಪುಟ್ಟಣಶೆಟ್ಟಿ ಯಾವ ಇಸವಿಯಲ್ಲಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮರಣ ಹೊಂದಿದಾಗ ನನಗೆ 13-14 ನೇ ವರ್ಷ ಆಗಿರುತ್ತದೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕೇಸುಗಳು ನಡೆದಿದೆ ಎಂದರೆ ಸರಿ. ಸದರಿ ಕೇಸನ್ನು ನನ್ನ ಅಣ್ಣ ಮಂಜುನಾಥ ರವರು ಸಲ್ಲಿಸಿರುತ್ತಾರೆ. ದಾವಾ ಸ್ವತ್ತನ್ನು ಕೃಷ್ಣಮ್ಮನವರು ಮಾರಾಟ ಮಾಡಿದ್ದನ್ನು ಕುರಿತು ಸಲ್ಲಿಸಿರುತ್ತಾರೆ. ಆ ಕೇಸನ್ನು ವಾದಸ್ವತ್ತನ್ನು ಮಂಜುನಾಥ ರವರು ಪುಟ್ಟಣಶೆಟ್ಟಿ ನನಗೆ ವಿಲ್ ಬರೆದಿರುತ್ತಾರೆ ಎಂದು ಕೇಸನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ.

3. ಮಂಜುನಾಥ ರವರು ವಿ.ಎಸ್.ಟಿ.ಗುಪ್ತ ರವರ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಕೃಷ್ಣಮ್ಮ ಮತ್ತು ರೇಣುಕಾ ರವರು ಓ.ಎಸ್.ನಂ.278/1984 ರಂತೆ ಉದ್ಘೋಷಣೆ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ

ಕೇಸನ್ನು ರಾಜಿ ಮಾಡಿಕೊಂಡಿರುತ್ತಾರೆ ಎಂದೆ ಸರಿ. ಮಂಜುನಾಥರವರು ಕಾಯಿಲೆ ಬಿದ್ದಾಗ ಲಲಿತಮ್ಮನವರು ಚಿಂತಾಮಣಿಯಿಂದ ಬಂದು ಅವರನ್ನು ಆರೈಕೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕೇಸು ರಾಜಿಯಿಂದ ಮಂಜುನಾಥ ರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಮಂಜುನಾಥ ರವರ ಹೆಸರಿಗೆ ಪಹಣಿ ಮತ್ತು ಖಾತೆ ಬಂದಿರುತ್ತದೆ ಎಂದರೆ ಸರಿ. ಮಂಜುನಾಥ ರವರ ಮರಣದ ನಂತರ ಅವರ ಹೆಂಡತಿ ದೀಪಾ ರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4. ನನಗೆ 55 ವರ್ಷ ಆಗಿರುತ್ತದೆ. ಲಲಿತಮ್ಮ ಮತ್ತು ಪುಟ್ಟಣಶೆಟ್ಟಿ ಗೆ ತಂದೆ ಮಗಳ ಸಂಬಂಧ ಇದೆ ಎಂದರೆ ಸರಿಯಲ್ಲ. ನಾನು ದೀಪಾ ರವರ ಕುಟುಂಬಕ್ಕೆ ಸೇರಿದವಳಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಮಂಜುನಾಥ ರವರ ಹೆಸರಿನಲ್ಲಿರುವ ಖಾತೆಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿರುವುದಿಲ್ಲ. ನಾನು ಒಟ್ಟು ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ. ನಾವು ನಂಜುಂಡಪ್ಪನವರ ಕುಟುಂಬಕ್ಕೆ ಸೇರಿದವರು ಎಂದರೆ ಸರಿಯಲ್ಲ. ನಮ್ಮ ವಾಸಸ್ಥಳ ಚಿಂತಾಮಣಿ ಎಂದರೆ ಸರಿಯಲ್ಲ. ನನಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.